ಓ.ಎಸ್.ನಂ.24/2024

ಡಿ ಡಬ್ಲ್ಯೂ: 1

ದಿನಾಂಕ 02.04.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಜೊತೆಗೆ ಕೃಷಿ ಕೆಲಸ ಸಹ ಮಾಡುತ್ತೇನೆ ಎಂದರೆ ಸರಿ. ನಾನು ಕನ್ನಡ ಶಾಲೆ ಶಿಕ್ಷಕನಾಗಿರುತ್ತೇನೆ. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ವಾದಿಯರು ಹಿಸ್ಸಾ ದಾವಾ ಮಾಡಿರುತ್ತಾರೆ ಎಂದರೆ ಸರಿ. ವಾದಿಯರು 1 ರಿಂದ 3 ನೇ ಪ್ರತಿವಾದಿಗಳ ಖಾಸ ಸಹೋದರಿಯರು ಎಂದರೆ ಸರಿ. ದಾವಾ ಆಸ್ತಿಯು ವಾದಿಗಳ ಮತ್ತು 1 ರಿಂದ 3 ನೇ ಪ್ರತಿವಾದಿಗಳ ಹಿರಿಯರ ಆಸ್ತಿ ಎಂದರೆ ಸಾಕ್ಷಿಯು ವಾದಿಗಳ ಅಜ್ಜಿಯ ತವರು ಮನೆ ಆಸ್ತಿಯಾಗಿರುವುದಾಗಿ ನುಡಿಯುತ್ತಾರೆ.

**2.** ನಿಡಿ 8ರ ದಾವೆಯಲ್ಲಿ ಈ ಪ್ರಕರಣದ ವಾದಿಗಳು ಮತ್ತು 1 ರಿಂದ 3 ನೇ ಪ್ರತಿವಾದಿಗಳು 1 ರಿಂದ 6 ನೇ ಪ್ರತಿವಾದಿಗಳಾಗಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ರಾಜಿ ಡಿಕ್ರಿಯ ಪ್ರಕಾರ ದಾವಾ ಆಸ್ತಿಯು ವಾದಿಗಳು ಮತ್ತು 1 ರಿಂದ 3 ನೇ ಪ್ರತಿವಾದಿಗಳ ಸಾಮೂಹಿಕ ಆಸ್ತಿ ಎಂದರೆ ಸರಿಯಲ್ಲ. ಸದರಿ ರಾಜಿ ಡಿಕ್ರಿಯ ನಂತರ ವಾದಿಯರು ಮತ್ತು 1 ರಿಂದ 3 ನೇ ಪ್ರತಿವಾದಿಗಳು ದಾವಾ ಆಸ್ತಿಯ ಕುರಿತು ಹಿಸ್ಸೇ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**3.** ನಾನು 1 ನೇ ಪ್ರತಿವಾದಿಯಿಂದ ದಾವಾ 7 ನೇ ಆಸ್ತಿ ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಯ ಸರ್ವೆ ನಂ.72/2/ಕ, 1 ಎಕರೆ 2 ಗುಂಟೆ ಆಗಿರುತ್ತದೆ. ಸದರಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ದಾಖಲೆಗಳನ್ನು ನೋಡಿ ಖರೀದಿಸಿರುತ್ತೇನೆ. ಸದರಿ ಆಸ್ತಿಯು ಖರೀದಿಯ ಸಮಯದಲ್ಲಿ 1 ನೇ ಪ್ರತಿವಾದಿಗೆ ತಮ್ಮ ಸಹೋದರ ಸಹೋದರಿಯರ ನಡುವಿನ ಪಾಲು ವಾಟ್ನಿಯಲ್ಲಿ ಬಂದ ಆಸ್ತಿಯಾಗಿರುತ್ತದೆ. ಆ ಕುರಿತು ನಾನು ಪಾಲು ವಿಭಾಗ ಪತ್ರ ನೋಡಿರುತ್ತೇನೆ. ಸದರಿ ದಾಖಲೆಯನ್ನು ನಾನು ಈ ಪ್ರಕರಣದಲ್ಲಿ ನಾನು ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ಪಾಲು ವಾಟ್ನಿ ಯನ್ನು ನಿಡಿ 8ರ ರಾಜೀ ಡಿಕ್ರಿಯ ನಂತರ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**4.** 1 ನೇ ಪ್ರತಿವಾದಿಯು ವಾದಿಯರು ಮತ್ತು 2 ರಿಂದ 3 ನೇ ಪ್ರತಿವಾದಿಗಳಿಗೆ ತಿಳಿಯದಂತೆ ದಾವಾ 7 ನೇ ಆಸ್ತಿಯನ್ನು ಖೊಟ್ಟಿ ರೂಪದಲ್ಲಿ ತನ್ನ ಹೆಸರಿಗೆ ವರ್ಗಾಯಿಸಿಕೊಂಡಿದ್ದನು ಎಂದರೆ ಸರಿಯಲ್ಲ. ಆ ಕಾರಣ 1 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನನಗೆ ಬರೆದುಕೊಟ್ಟ ಖರೀದಿ ಪತ್ರವು ವಾದಿಗಳಿಗೆ ಬಂದನಕಾರಿ ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.